ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 16–10–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ನವೀಕೃತ ಡಾ. ಬಿ. ಆರ್. ಅಂಬೇಡ್ಕರ್ ಭವನ ಉದ್ಘಾಟನಾ ಸಮಾರಂಭ:<br>**ಉದ್ಘಾಟನೆ:**<br>ಶ್ರೀ ಸಿದ್ದರಾಮಯ್ಯ,<br>ಮಾನ್ಯ ಮುಖ್ಯಮಂತ್ರಿಗಳು.<br>**ಅಧ್ಯಕ್ಷತೆ:**<br>ಶ್ರೀ ಹೆಚ್. ಆಂಜನೇಯ,<br>ಸಮಾಜ ಕಲ್ಯಾಣ ಸಚಿವರು, ಹಾಗೂ ಅಧ್ಯಕ್ಷರು ಡಾ. ಬಿ.ಆರ್. ಅಂಬೇಡ್ಕರ್ ಮೆಮೋರಿಯಲ್ ಟ್ರಸ್ಟ್.<br>**ಮುಖ್ಯ ಅತಿಥಿಗಳು;**<br>ಶ್ರೀ ಮಲ್ಲಿಕಾರ್ಜುನ ಖರ್ಗೆ<br>ಮಾಜಿ ಕೇಂದ್ರ ಸಚಿವರು ಮತ್ತು ಲೋಕಸಭಾ ಸದಸ್ಯರು<br>ಶ್ರೀ ಶ್ರೀನಿವಾಸ ಪ್ರಸಾದ್,<br>ಕಂದಾಯ ಸಚಿವರು,<br>ಶ್ರೀ ಕೆ.ಹೆಚ್. ಮುನಿಯಪ್ಪ,<br>ಕೇಂದ್ರದ ಮಾಜಿ ಸಚಿವರು ಹಾಗೂ ಲೋಕಸಭಾ ಸದಸ್ಯರು. | 17–10–2014<br>ಶುಕ್ರವಾರ<br>ಬೆಳಿಗ್ಗೆ<br>10–30 ಗಂಟೆಗೆ | ಡಾ. ಬಿ.ಆರ್. ಅಂಬೇಡ್ಕರ್ ಭವನ,<br>ಮಿಲ್ಲರ್ಸ್ ರಸ್ತೆ, ವಸಂತನಗರ,<br>ಬೆಂಗಳೂರು. |

| | | | |
|---|---|---|---|
| | ಶ್ರೀ ಆರ್. ರೋಷನ್ ಬೇಗ್,<br>ಮೂಲಭೂತ ಸೌಲಭ್ಯ ಅಭಿವೃದ್ಧಿ, ಹಜ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಖಾತೆ ಸಚಿವರು.<br><br>ಡಾ. ಹೆಚ್.ಸಿ.ಮಹದೇವಪ್ಪ,<br>ಲೋಕೋಪಯೋಗಿ ಸಚಿವರು.<br><br>ಶ್ರೀ ಕೆ.ಜೆ. ಜಾರ್ಜ್<br>ಗೃಹ ಸಚಿವರು,<br><br>ಶ್ರೀ ಡಿ. ಹೆಚ್. ಶಂಕರಮೂರ್ತಿ,<br>ವಿಧಾನ ಪರಿಷತ್ ಸಭಾಪತಿಗಳು<br><br>ಶ್ರೀ ಕಾಗೋಡು ತಿಮ್ಮಪ್ಪ<br>ವಿಧಾನಸಭಾಧ್ಯಕ್ಷರು.<br><br>ಶ್ರೀ ಡಿ.ವಿ. ಸದಾನಂದಗೌಡ,<br>ಕೇಂದ್ರ ರೈಲ್ವೆ ಸಚಿವರು.<br><br>ಶ್ರೀ ಅನಂತಕುಮಾರ್,<br>ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು.<br><br>ಶ್ರೀ ಎಂ. ವೆಂಕಯ್ಯ ನಾಯ್ಡು,<br>ಕೇಂದ್ರ ನಗರಾಭಿವೃದ್ಧಿ ಸಚಿವರು<br><br>ಶ್ರೀ ರಾಮಲಿಂಗಾರೆಡ್ಡಿ,<br>ಸಾರಿಗೆ ಸಚಿವರು. | | |
| **2** | **Launching of New Industrial Policy 2014-19**<br>**by**<br><br>**Shri Siddaramaiah,**<br>**Chief Minister, Government of** | **17-10-2014**<br>**Friday**<br>**at 4-30 p.m.** | **Banquet Hall,**<br>**Vidhana Soudha,**<br>**Bangalore** |

| | | | |
|---|---|---|---|
| | **Karnataka**<br><br>**Chief Guests:**<br><br>**Sri R.V. Deshpande,**<br>**Minister for Higher Education & Tourism**<br><br>**Sri S.R. Patil,**<br>**Minister for Planning, Statistics, IT, BT and Science & Technology**<br><br>**Sri R. Roshan Baig,**<br>**Minister for Infrastructure Development, Information & Public Relations and Haj** | | |
| **2.** | **ಹೊಸ ಕೈಗಾರಿಕಾ ನೀತಿ 2014–19 ರ ಬಿಡುಗಡೆ ಸಮಾರಂಭ:**<br><br>ಬಿಡುಗಡೆ:<br><br>ಸನ್ಮಾನ್ಯ ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು<br><br>ಮುಖ್ಯ ಅತಿಥಿಗಳು:<br><br>ಶ್ರೀ ಆರ್. ವಿ. ದೇಶಪಾಂಡೆ,<br>ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು.<br><br>ಶ್ರೀ ಎಸ್.ಆರ್. ಪಾಟೀಲ್,<br><br>ಯೋಜನೆ ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು<br><br>ಶ್ರೀ ಆರ್. ರೋಷನ್ ಬೇಗ್,<br>ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು. | **17–10–2014**<br><br>**ಶುಕ್ರವಾರ**<br><br>**ಸಂಜೆ**<br><br>**4–30 ಗಂಟೆಗೆ** | **ಬ್ಯಾಂಕ್ವೆಟ್ ಹಾಲ್,**<br><br>**ವಿಧಾನಸೌಧ,**<br><br>**ಬೆಂಗಳೂರು.** |

| | | | |
|---|---|---|---|
| 3 | ಹೆಲ್ತಿಜೆನ್ (Healthzen) ಕಾರ್ಯಕ್ರಮ ಉದ್ಘಾಟನೆ:<br>ಡಾ: ಹರ್ಷವರ್ಧನ್,<br>ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು<br>ಶ್ರೀ ಯು.ಟಿ. ಖಾದರ್,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ | 17–10–2014<br>ಶುಕ್ರವಾರ<br>5–00 ಗಂಟೆಗೆ | ಕೊಠಡಿ ಸಂಖ್ಯೆ 419<br>ಸಮ್ಮೇಳನ ಸಭಾಂಗಣ<br>ವಿಕಾಸ ಸೌಧ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

# ಸಚಿವ ಸಂಪುಟದ ನಿರ್ಣಯಗಳು

**ಬೆಂಗಳೂರು, ಅಕ್ಟೋಬರ್ 16 (ಕರ್ನಾಟಕ ವಾರ್ತೆ)**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪ್ರಾರ್ಥನಾ ಸ್ಥಳಗಳ ಮೇಲೆ ನಡೆದ ದಾಳಿ ಕುರಿತು ನೇಮಿಸಲಾದ ನ್ಯಾಯಮೂರ್ತಿ ಶ್ರೀ ಬಿ.ಕೆ. ಸೋಮಶೇಖರ್ ವಿಚಾರಣಾ ಆಯೋಗವು ಸಲ್ಲಿಸಿರುವ ವರದಿಯನ್ನು ಇಂದು ನಡೆದ ಸಚಿವ ಸಂಪುಟದಲ್ಲಿ ತಿರಸ್ಕರಿಸಲಾಯಿತು ಎಂದು ಕಾನೂನು ಸಚಿವ ಶ್ರೀ ಟಿ.ಬಿ. ಜಯಚಂದ್ರ ಅವರು ತಿಳಿಸಿದರು.

ಸಚಿವ ಸಂಪುಟದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು ನ್ಯಾಯಮೂರ್ತಿ ಶ್ರೀ ಬಿ.ಕೆ. ಸೋಮಶೇಖರ್ ಅವರು ಮಧ್ಯಂತರ ಹಾಗೂ ಅಂತಿಮ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದರು. ಆದರೆ ಆ ಎರಡೂ ವರದಿಗಳಲ್ಲಿನ ಶಿಫಾರಸ್ಸುಗಳಲ್ಲಿ ಸಾಮ್ಯತೆ ಇಲ್ಲದ ಕಾರಣ ವರದಿಯನ್ನು ತಿರಸ್ಕರಿಸಲಾಯಿತು ಎಂದರು.

ರಸ್ತೆ ಅಪಘಾತಗಳಲ್ಲಿ ಗಾಯಗೊಂಡ ಗಾಯಾಳುಗಳ ತುರ್ತು ಚಿಕಿತ್ಸೆ ಹಾಗೂ ವೈದ್ಯಕೀಯ ಚಿಕಿತ್ಸೆಗಾಗಿ ಮುಖ್ಯಮಂತ್ರಿಗಳ ಸಾಂತ್ವನ ಯೋಜನೆಯಡಿ ತಕ್ಷಣ 25,000 ರೂ. ಪರಿಹಾರ ಬಿಡುಗಡೆ ಮಾಡಲು ಹಾಗೂ 5.00 ಕೋಟಿ ರೂ. ಹಣವನ್ನು ಈ ಯೋಜನೆಗೆ ಮೀಸಲಿಡಲಾಗಿದೆ ಎಂದರು.

ಸುಮಾರು 11 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಗರದ ಕೆಂಗೇರಿ ಹೋಬಳಿಯಲ್ಲಿ ಮೈಲಸಂದ್ರ ಗ್ರಾಮದಲ್ಲಿ ಡಾ. ವಿಷ್ಣುವರ್ಧನ್ ಸ್ಮಾರಕ ಕಟ್ಟಡ ನಿರ್ಮಾಣಕ್ಕೆ ಇಂದು ನಡೆಸ ಸಚಿವ ಸಂಪುಟದಲ್ಲಿ ಒಪ್ಪಿಗೆ ನೀಡಲಾಯಿತು ಎಂದರು.

ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಅಳವೆಕೋಡಿ ಮೀನುಗಾರಿಗೆ ಇಳಿದಾಣ ಹಾಗೂ ವಿಸ್ತರಣಾ ಕಾಮಗಾರಿಯನ್ನು ಅಂದಾಜು 5 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಸಚಿವ ಸಂಪುಟ ಒಪ್ಪಿಗೆ ನೀಡಲಾಯಿತು.

ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಇವರು ಹಿಂದುಳಿದ ಫಲಾನುಭವಿಗಳಿಗೆ ಸಾಲ ಸೌಲಭ್ಯ ಒದಗಿಸಲು ರಾಷ್ಟ್ರೀಯ ಹಿಂದುಳಿದ ವರ್ಗ ಅಭಿವೃದ್ಧಿ ನಿಗಮದಿಂದ 26 ಕೋಟಿ ರೂ. ಸಾಲ ಪಡೆಯಲು ರಾಜ್ಯ ಸರ್ಕಾರ ಖಾತ್ರಿ ನೀಡಲು ಸಚಿವ ಸಂಪುಟ ತೀರ್ಮಾನಿಸಲಾಯಿತು ಎಂದು ಕಾನೂನು ಸಚಿವರು ತಿಳಿಸಿದರು.

ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಅಪರ ನಿಭಂದಕರಾಗಿ ಗುತ್ತಿಗೆ ಆಧಾರದ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎ.ಎಂ. ಬೆನ್ನೂರು ಇವರನ್ನು ಇನ್ನು ಒಂದು ವರ್ಷದ ಅವಧಿಗೆ ಮುಂದುವರೆಸಲು ಸಚಿವರ ಸಂಪುಟ ತೀರ್ಮಾನಿಸತು ಎಂದು ತಿಳಿಸಿದರು.

ನಿವೃತ್ತ ಐ.ಎ.ಎಸ್. ಅಧಿಕಾರಿ ಶ್ರೀ ಪಿ.ಎನ್. ಶ್ರೀನಿವಾಸಚಾರಿ ಅವರನ್ನು ರಾಜ್ಯ ಚುನಾವಣಾ ಆಯೋಗದ ಆಯುಕ್ತರನ್ನಾಗಿ ನೇಮಕ ಮಾಡಲು ಸಚಿವ ಸಂಪುಟ ಒಪ್ಪಿಗೆ ನೀಡಿತು.

ರಾಜ್ಯ ಗ್ರಾಹಕರು ಸಂರಕ್ಷಣಾ ಪರಿಷತ್ತಿಗೆ 3 ವಿಧಾನ ಸಭಾ ಹಾಗೂ 2 ವಿಧಾನ ಸಭಾ ಸದಸ್ಯರ ನೇಮಕಕ್ಕೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿತು.

ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿ ಚುಂಚನಗುಪ್ಪೆ ಗ್ರಾಮದಲ್ಲಿ ರಾಜೀವ್‌ಗಾಂಧಿ ವಸತಿ ನಿಗಮಕ್ಕೆ 15 ಎಕರೆ ಜಮೀನನ್ನು ಹಸ್ತಾಂತರಿಸುವ ಪ್ರಸ್ತಾಪಕ್ಕೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ವೇತನ ಹಾಗೂ ಸೀಟುಗಳ ಹಂಚಿಕೆಯನ್ನು 2012 ಅಕ್ಟೋಬರ್ ವರೆಗೆ ಪರಿಷ್ಕರಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಸಚಿವಾಲಯದ ಕಡತ ವಿಲೇವಾರಿ ಹಿಂದೆ 15 ದಿನಗಳ ನಡೆದು ಅದರಲ್ಲಿ 35018 ಕಡತಗಳನ್ನು ವಿಲೇವಾರಿ ಮಾಡಲಾಗಿತ್ತು. ಸೆಪ್ಟೆಂಬರ್ 1, 2014 ರಿಂದ 30 ರವರೆಗೆ 58,258 ಕಡತಗಳನ್ನು ವಿಲೇವಾರಿ ಮಾಡಲಾಗಿದೆ. ಇನ್ನು ಮುಂದೆ ರಾಜ್ಯದ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ನವೆಂಬರ್ ತಿಂಗಳಲ್ಲಿ ಕಡತ ವಿಲೇವಾರಿ ಮಾಡಲು ಸಚಿವ ಸಂಪುಟದಲ್ಲಿ ಸೂಚಿಸಲಾಗಿದೆ.

ಕೆಪಿಪಿ/ಕವನ/ಕೆಎಂ

## ಜೀವ ರಕ್ಷಕ ಕುರಿತಂತೆ ತರಬೇತಿ

**ಬೆಂಗಳೂರು, ಅಕ್ಟೋಬರ್ 16 (ಕರ್ನಾಟಕ ವಾರ್ತೆ)**

ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯ ವತಿಯಿಂದ ಜೀವ ರಕ್ಷಕ್ ಪಡೆಯ (Emergency Response & Rescue Unit) ಸಿದ್ದಪಡಿಸಲಾಗುವುದು. ಈ ಜೀವ ರಕ್ಷಕ ಪಡೆಗೆ ಸೇರಬಯಸುವ ಯುವಕರಿಗೆ ಅತ್ಯಂತ ಕಠಿಣತರವಾದ ತರಬೇತಿಯನ್ನು ಅಕಾಡೆಮಿಯ ವತಿಯಿಂದ ನೀಡಿ ಸಜ್ಜುಗೊಳಿಸಲಾಗುವುದು. ಕನಿಷ್ಠ 10 ನೇ ತರಗತಿಯಲ್ಲಿ ಉತ್ತೀರ್ಣ, 21 ರಿಂದ 30 ವರ್ಷಗಳ ವಯೋಮಿತಿ, ಬೇಸಿಕ್ ಕಂಪ್ಯೂಟರ್ ತರಬೇತಿಯೊಂದಿಗೆ ಕನ್ನಡ, ಇಂಗ್ಲೀಷ್ ಹಾಗೂ ಹಿಂದಿಯ ಪರಿಜ್ಞಾನವಿದ್ದು, ವಾಹನ ಚಾಲನೆಯಲ್ಲಿ ಅನುಭವ ಮತ್ತು ಉತ್ತಮ ದೇಹದಾರ್ಢ್ಯ ಅರ್ಹತೆಯುಳ್ಳ ಯುವಕರ ದಿನಾಂಕ 20-10-2014 ರೊಳಗೆ ಹೆಸರುಗಳನ್ನು ಆಡಳಿತಾಧಿಕಾರಿಗಳು, ಚೇತನಾ, ರಾಜ್ಯ ಯುವಕ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು ಇಲ್ಲಿ ನೊಂದಾಯಿಸಿಕೊಳ್ಳಬಹುದಾಗಿದೆ ಎಂದು ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯ ನಿರ್ದೇಶಕರು ತಿಳಿಸಿದ್ದಾರೆ.

ಕವನ:ಜಿಪಿಆರ್.

## ಸಾಕ್ಷ್ಯಚಿತ್ರ ತಯಾರಿಸಲು ಅರ್ಜಿ ಆಹ್ವಾನ

**ಬೆಂಗಳೂರು, ಅಕ್ಟೋಬರ್ 16 (ಕರ್ನಾಟಕ ವಾರ್ತೆ)**

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ವತಿಯಿಂದ 2013-14 ನೇ ಸಾಲಿನಲ್ಲಿ ಯಕ್ಷಗಾನ ಬಯಲಾಟ ಕಲೆ/ಕಲಾವಿದರ ಸಾಕ್ಷ್ಯಚಿತ್ರ ತಯಾರಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಾಕ್ಷ್ಯಚಿತ್ರ ತಯಾರಿಕೆಯಲ್ಲಿ ಕನಿಷ್ಠ 10 ವರ್ಷಗಳ ಅನುಭವವುಳ್ಳ ಆಸಕ್ತ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡದ ನಿರ್ದೇಶಕರು/ನಿರ್ಮಾಪಕರು ಅರ್ಜಿಯನ್ನು ಸಲ್ಲಿಸಬಹುದು.

ಅರ್ಜಿಯನ್ನು ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯಲ್ಲಿ ಪಡೆಯಬಹುದಾಗಿದೆ. ಅರ್ಜಿ ಸಲ್ಲಿಸಲು ನವೆಂಬರ್ 10 ಕೊನೆಯ ದಿನವಾಗಿದೆ. ಹೆಚ್ಚಿನ ವಿವರಗಳಿಗೆ ಅಕಾಡೆಮಿಯ ರಿಜಿಸ್ಟ್ರಾರ್ ( ದೂ. 080-22223146) ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ರಿಜಿಸ್ಟ್ರಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕವನ:ಜಿಪಿಆರ್.

## "ಶ್ರೇಷ್ಠ ಲೇಖಕ" ಪುರಸ್ಕಾರಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು, ಅಕ್ಟೋಬರ್ 16 (ಕರ್ನಾಟಕ ವಾರ್ತೆ)**

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗ ಸಂಸ್ಥೆಯಾಗಿದ್ದು, ಕನ್ನಡದಲ್ಲಿ ವಿಜ್ಞಾನ ವಿಷಯದ ಪುಸ್ತಕಗಳ ಬರವಣಿಗೆಯನ್ನು ಪ್ರೋತ್ಸಾಹಿಸುವ ಸಲುವಾಗಿ 2009 ರಿಂದ "ಶ್ರೇಷ ಲೇಖಕ' ರಾಜ್ಯ ಮಟ್ಟದ ಪ್ರಶಸ್ತಿಯನ್ನು ನೀಡುತ್ತಾ ಬರುತ್ತಿದೆ.

2014–15 ನೇ ಸಾಲಿನ "ಶ್ರೇಷ್ಠ ಲೇಖಕ" ಪ್ರಶಸ್ತಿಗೆ ಕೃಷಿ ವಿಜ್ಞಾನ, ತಂತ್ರಜ್ಞಾನ ಮತ್ತು ವೈದ್ಯಕೀಯ ವಿಷಯಗಳಲ್ಲಿ ಕನ್ನಡದಲ್ಲಿ ಪುಸ್ತಕಗಳನ್ನು ಪ್ರಕಟಿಸಿರುವ ಲೇಖಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಪುಸ್ತಕಗಳ ಸಂಖ್ಯೆಗನುಗುಣವಾಗಿ ಪ್ರತಿ ವಿಷಯಕ್ಕೆ ಗರಿಷ್ಠ 2 ಪ್ರಶಸ್ತಿಗಳನ್ನು ನೀಡಲಾಗುವುದು. ಆಯ್ಕೆಯಾದ ಲೇಖಕರಿಗೆ ರೂ 25 ಸಾವಿರಗಳ ಪುರಸ್ಕಾರ ಹಾಗೂ ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಲಾಗುವುದು.

ಜನವರಿ 2014 ರಿಂದ ಡಿಸೆಂಬರ್ 2014 ರೊಳಗೆ ಮೇಲ್ಕಂಡ ವಿಷಯಗಳಲ್ಲಿ ಕನ್ನಡದಲ್ಲಿ ಪ್ರಕಟಗೊಂಡ ಪುಸ್ತಕಗಳನ್ನು ಈ ಪ್ರಸ್ತಿಗೆ ಸಲ್ಲಿಸಬಹುದಾಗಿದೆ. ಲೇಖಕರು ನಿಗದಿತ ನಮೂನೆಯ ಅರ್ಜಿಯೊಂದಿಗೆ ಪುಸ್ತಕದ ನಾಲ್ಕು ಪ್ರತಿಗಳನ್ನು ಜನವರಿ 5, 2015 ರೊಳಗೆ ಸದಸ್ಯ ಕಾರ್ಯದರ್ಶಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ವಿಜ್ಞಾನ ಭವನ, 24/2, 21 ನೇ ಮುಖ್ಯರಸ್ತೆ, ಬಿಡಿಎ ಕಾಂಪ್ಲೆಕ್ಸ್ ಹತ್ತಿರ, ಬನಶಂಕರಿ 2ನೇ ಹಂತ, ಬೆಂಗಳೂರು - 560 070 ಇಲ್ಲಿಗೆ ಸಲ್ಲಿಸಬೇಕು. ಅರ್ಜಿ ನಮೂನೆ ಹಾಗೂ ಇತರೆ ವಿವರಗಳಿಗೆ ಅಕಾಡೆಮಿಯ ವೆಬ್‌ಸೈಟ್ www.kstacademy.org ವೀಕ್ಷಿಸಬಹುದಾಗಿದೆ.

ಕವನ:ಜಿಪಿಆರ್.

## ಉದ್ಯೋಗ ವಿನಿಮಯ ಕಚೇರಿಯ ಸೆಪ್ಟೆಂಬರ್ ಮಾಹೆಯ ಪ್ರಗತಿ

**ಬೆಂಗಳೂರು, ಅಕ್ಟೋಬರ್ 16 (ಕರ್ನಾಟಕ ವಾರ್ತೆ)**

ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನ ಒಳಗೊಂಡಿರುವ ಬೆಂಗಳೂರಿನ ಉಪಪ್ರಾದೇಶಿಕ ಉದ್ಯೋಗ ವಿನಿಮಯ ಕಚೇರಿಯು ಸೆಪ್ಟೆಂಬರ್ ಮಾಹೆಯಲ್ಲಿ 392 ಪುರುಷ ಹಾಗೂ 256 ಮಹಿಳೆಯರನ್ನು ಸೇರಿದಂತೆ 648 ಅಭ್ಯರ್ಥಿಗಳನ್ನು ನೋಂದಣಿ ಮಾಡಿಸಿದ್ದು, ಒಟ್ಟು 7 ಜನರಿಗೆ ಉದ್ಯೋಗವನ್ನು ಒದಗಿಸಿಕೊಟ್ಟಿದೆಯಲ್ಲದೆ ಪರಿಶಿಷ್ಟ ಜಾತಿಯ 167 ಹಾಗೂ ಪರಿಶಿಷ್ಟ ಪಂಗಡದ 22 ಅಭ್ಯರ್ಥಿಗಳನ್ನು ನೋಂದಾಯಿಸಿಕೊಂಡಿದೆ. ಈ ಮಾಹೆಯಲ್ಲಿ 165 ಮಂದಿ ವೃತ್ತಿಯ ಕುರಿತು ಮಾಹಿತಿಯನ್ನು ಪಡೆದಿದ್ದರೆ, 296 ಮಂದಿ ವೃತ್ತಿ ಕುರಿತು ವೈಯಕ್ತಿಕ ಮಾರ್ಗದರ್ಶನವನ್ನು ಪಡೆದುಕೊಂಡಿದ್ದಾರೆಂದು ಉಪ ಪ್ರಾದೇಶಕ ಉದ್ಯೋಗ ವಿನಿಮಯ ಕೇಂದ್ರವು ಪ್ರಕಟಣೆಯಲ್ಲಿ ತಿಳಿಸಿದೆ.

ಕವನ:ಬಿಜಿಪಿ:ಜಿಪಿಆರ್.

## Commissionerate of Customs, Bangalore has been bifurcated

Bangalore, October 16 (Karnataka Informaion)

As part of the re-organisation of the Customs, Central Excise and Service Tax Department under taken by the Central Board of Excixe & Customs, the existing Commissionerate of Customs, Bangalore has been bifurcated into two Customs Commissionerate viz., Bangalore City Commissionerate and Airport and Air Cargo Complex Commissionerate, Bangalore with effect from 15-10-2014. A public Notice No. 15/2014 dated 13-10-2014 has been issued in this regard.

kavana/km

## Application Invited

Bangalore, October 16 (Karnataka Informaion)

Applications are invited from the boys for admission to class VI and IX through Entrance Examination (Girls are not admitted) from Sainik School of Bijapur running under Ministry of Defence, Government of Karnataka. For class VI Boys born between 2nd July 2004 and 1st July 2005 , for class IX boys born ntween 2nd July 2001 and 1st July 2002. Entrance Exam will be conducted on Sunday 4th January 2015.

There are 100 seats for class VI and 5 seats for class IX. Reservations 15% for SC, 7.5 % for ST and 25% for Defence Children of Coast Guard personal. Tution fees are fixed and scholarship scheme is applicable.

Application forms can be obtained on payment either by cash or by post by sending demand draft of Rs. 450 for General and defence category and Rs 300 for SC/ST candidates (Submission of Xerox copy of SC/ST certificate compulsory) Demand draft drawn infavour of the Principal, Sainik School, Bijapur along with self addressed thick envelope (size 9x7) with postal stamp worth Rs. 70 for Speed /Registered Post with acknowledge due affixed on the envelope be forwarded to Principal, Sainik School, Bijapur-586 102 (Karnataka) clearly indicating whether you want the Prospectus for Class VI in English or Kannada and for Class IX in English only. Application form will be available from 15th October 2014 to 29 November 2014 and receipt of applications is 06 December 2014 duly completed in all respect. Application form can also be downloaded from school website www.ssbj.in such application forms should be accompanied with Demand Draft of Rs. 450/- for General and Defence category and Rs. 300/- for SC/ ST category.

Note: Admission is strictly based on merit list prepared on the basis of marks obtained in the Entrance Examination and Interview.

kavana/km

## ರಾಜ್ಯ ಚುನಾವಣಾ ಆಯುಕ್ತರಾಗಿ ಶ್ರೀನಿವಾಸಚಾರಿ

**ಬೆಂಗಳೂರು, ಅಕ್ಟೋಬರ್ 16 (ಕರ್ನಾಟಕ ವಾರ್ತೆ)**

ರಾಜ್ಯ ಚುನಾವಣಾ ಆಯೋಗದ ನೂತನ ಆಯುಕ್ತರಾಗಿ ನಿವೃತ್ತ ಐ.ಎ.ಎಸ್. ಅಧಿಕಾರಿ ಶ್ರೀ ಪಿ.ಎನ್. ಶ್ರೀನಿವಾಸಚಾರಿ ಅವರನ್ನು ನೇಮಕ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಆಯೋಗದ ಆಯುಕ್ತರಾಗಿದ್ದ ಚಿಕ್ಕಮಠ್ ಅವರ ನಿವೃತ್ತಿಯಿಂದ ತೆರವಾದ ಸ್ಥಾನಕ್ಕೆ ಶ್ರೀ ಪಿ.ಎನ್. ಶ್ರೀನಿವಾಸಚಾರಿ ಅವರನ್ನು ನೇಮಕ ಮಾಡಲು ಸಂಪುಟ ಅನುಮೋದನೆ ನೀಡಿದೆ.

ಪಹೊ/ಕೆಎಂ

## State Information Commissioner

Bangalore, October 16 (Karnataka Informaion)

His Excellency the Governor of Karnataka Shri VAjubhai Vala, appoint following persons as State Information Commissioners, Karnataka Information Commission. 1) Shri L. Krishnamurthy, 2) Shri Shankar R. Patil. The term of office of the Commissioners shall be as provided under Section 16(2) of the Act.

kavana/km